ಅಧ್ಯಕ್ಷರು :— ಆಯಿತು, ಈಗ ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

ಶ್ರೀ ಹೆಚ್. ಶಿವಪ್ಪ :— ಇದನ್ನು ಅರ್ಧ ಗಂಟೆಯ ಚರ್ಚೆಗೆ ತೆಗೆದುಕೊಂಡರೆ ವಿವರಣೆ ನೀಡುತ್ತೇನೆ, ಇಲ್ಲ ಬಜೆಟ್‌ನಲ್ಲಿ ಬೇಕಾದರೂ ಹೇಳುತ್ತೇನೆ.

ಅಧ್ಯಕ್ಷರು :— ಆಯಿತು, ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಾರ್ತಾ ಹಾಗೂ ಪ್ರವಾಸೋದ್ಯಮ) :— ಮಾನ್ಯ ಅಧ್ಯಕ್ಷರೆ, 12ನೇ ಪಟ್ಟಿಯಲ್ಲಿರುವ 59 ಪ್ರಶ್ನೆಗಳ ಪೈಕಿ 38 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

*ಹುಬ್ಬಳ್ಳಿ ನಗರ ಪ್ರದೇಶದಲ್ಲಿ ಹದಗೆಟ್ಟಿರುವ ಒಳಚರಂಡಿ ವ್ಯವಸ್ಥೆ.*

815(1270) ಶ್ರೀ ಅಶೋಕ್ ಶಂಕರ್ ಕಾಟ್ವೆ (ಹುಬ್ಬಳ್ಳಿ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರ ಪ್ರದೇಶದಲ್ಲಿನ ಒಳಚರಂಡಿ ವ್ಯವಸ್ಥೆ ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ವಿಷಯದ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :—

ಅ) ಇಲ್ಲಾ

ಆ) ಒಳಚರಂಡಿ ವ್ಯವಸ್ಥೆಯು ಸಮರ್ಪಕವಾಗಿರುತ್ತದೆ. ಅವಶ್ಯಕ ದುರಸ್ತಿ ಕಾರ್ಯವನ್ನು ಆದ್ಯತೆ ಮೇರೆಗೆ ಕೈಗೊಳ್ಳಲಾಗುತ್ತಿದೆ.

*ಹುಬ್ಬಳ್ಳಿ ಪಟ್ಟಣದಲ್ಲಿ ಕೊಳವೆ ಬಾವಿಗಳ ನಿರ್ವಹಣೆ.*

816 (1285) ಶ್ರೀ ಅಶೋಕ್ ಶಂಕರ್ ಕಾಟ್ವೆ (ಹುಬ್ಬಳ್ಳಿ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಪಟ್ಟಣದಲ್ಲಿ ಇರುವ ಕೊಳವೆ ಬಾವಿಗಳ ಒಟ್ಟು ಸಂಖ್ಯೆ ಎಷ್ಟು? ಆ ಪೈಕಿ ಕಾರ್ಯನಿರ್ವಹಿಸುತ್ತಿರುವುಗಳ ಸಂಖ್ಯೆ ಎಷ್ಟು?